ತಕ್ಷಣದ ಪರಿಹಾರವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಅ. ಬಡವನಹಳ್ಳಿಯಿಂದ ರಂಟ್ವಾಳ ಗ್ರಾಮಕ್ಕೆ ಸುಮಾರು 15 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಫೀಡರ್ ನಿರ್ಮಾಣ.

ಆ. ಹಾಲಿ ಇರುವ ರಂಟ್ವಾಳ ಫೀಡರ್‌ನ ತಾಮ್ರದ ವಿದ್ಯುತ್ ವಾಹಕವನ್ನು ರ್ಯಾಬಿಟ್ ವಿದ್ಯುತ್ ವಾಹಕದ ಮೂಲಕ ಸುಮಾರು 10 ಕಿ.ಮೀ. ಉದ್ದಕ್ಕೆ ಬದಲಾಯಿಸುವುದು. ಬಾಕಿ ಉಳಿಯುವ ಸುಮಾರು 8 ಕಿ.ಮೀ. ಉದ್ದದ ತಾಮ್ರದ ವಿದ್ಯುತ್ ವಾಹಕವನ್ನು ರ್ಯಾಬಿಟ್ ವಿದ್ಯುತ್ ವಾಹಕದ ಮೂಲಕ ನಂತರದ ಹಂತದಲ್ಲಿ ಬದಲಾಯಿಸುವುದು. ಅಲ್ಲದೇ, ದೊಡ್ಡೇರಿ ಹೋಬಳಿಯ ಇನ್ನೆರಡು ಗಡಿ ಭಾಗದ ಗ್ರಾಮಗಳಾದ ವಿಟ್ಲಾಪುರ ಮತ್ತು ಗೋರಮುತ್ತನಹಳ್ಳಿಗಳಲ್ಲಿಯೂ ಸಹ ಕಡಿಮೆ ವೋಲ್ಟೇಜ್ ಸಮಸ್ಯೆ ಇದೆ. ಮಧುಗಿರಿ ವಿದ್ಯುತ್ ಸಬ್-ಸ್ಟೇಷನ್ನಿನ ಹಾಲಿ ಇರುವ ಚಂದ್ರಬಾವಿ ಫೀಡರ್‌ಗೆ ಎಕ್ಸ್‌ಪ್ರೆಸ್ ಫೀಡರ್‌ನ್ನು ನಿರ್ಮಾಣ ಮಾಡುವ ಮೂಲಕ ಈ ಸಮಸ್ಯೆಯನ್ನು ಬಗೆ ಹರಿಸಲಾಗುತ್ತಿದೆ.

582(472) : ಶ್ರೀ ಲಕ್ಷ್ಮಣ್ ಸಂಗಪ್ಪ ಸಾವದಿ (ಅಥಣಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿಯಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಡಿಪೋವನ್ನು ಮರಳಿ ಚಿಕ್ಕೋಡಿ ಡಿಪೋಗೆ ನಿಯುಕ್ತಿಗೊಳಿಸುವಂತೆ ಸಮಸ್ತ ಸಾರ್ವಜನಿಕರು ಕೋರಿದ್ದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಸದರಿ ಡಿಪೋದಲ್ಲಿ ನಿರುಪಯುಕ್ತವಾಗಿ ನಿಂತಿರುವ ಬಸ್‌ಗಳೆಷ್ಟು ಅವುಗಳ ವಿಲೇವಾರಿಗೆ ಸರ್ಕಾರವು ಕ್ರಮ ಜರುಗಿಸುವುದೇ;

ಇ) ಈ ಡಿಪೋದಲ್ಲಿ ಸರಿಯಾದ ಸಮಯಕ್ಕೆ ಬಸ್ ಸಂಚಾರವು ಇಲ್ಲದಿರುವ ಬಗ್ಗೆ ಸರ್ಕಾರವು ಕ್ರಮ ಜರುಗಿಸುವುದೇ;

ಈ) ಇಲ್ಲಿಯ ಡಿಪೋ ನಿರ್ವಾಣದಲ್ಲಿ ಇರುವ ಕೊಳಚೆ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಪ್ರಸ್ತುತ ಚಿಕ್ಕೋಡಿ ಡಿಪೋದಲ್ಲಿ ಪೂರ್ಣ ಪ್ರಮಾಣದ ವಿಭಾಗೀಯ ಕಾರ್ಯಾಗಾರ ಇಲ್ಲದಿರುವುದರಿಂದ, ವಾಹನಗಳ ಹೆಚ್ಚಿನ ದುರಸ್ತಿ ಕಾರ್ಯಗಳಿಗೆ ವಿಜಾಪುರ ಅಥವಾ ಬೆಳಗಾವಿ ವಿಭಾಗೀಯ ಕಾರ್ಯಾಗಾರವನ್ನು ಅವಲಂಬಿಸಬೇಕಾಗಿರುತ್ತದೆ. ಕಾರಣ, ಅಥಣಿಯಲ್ಲಿರುವ ಡಿಪೋವನ್ನು ಚಿಕ್ಕೋಡಿಗೆ ನಿಯುಕ್ತಿಗೊಳಿಸಲು ಸಾಧ್ಯವಿರುವುದಿಲ್ಲ.

ಆ) 29. ಈ ಪೈಕಿ 27 ವಾಹನಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಪಯುಕ್ತಗೊಳಿಸಲು ಯೋಜಿಸಲಾಗಿದೆ.

ಇ) ಮಾರ್ಗಗಳು ಕಾರ್ಯಾಚರಣೆ ವೇಳೆಗೆ ಸರಿಯಾಗಿ ಆಗುತ್ತಿದೆ.

ಈ) ಹೌದು.